



ಲಾಲ್ ಮನೆಗೆ ಬಂದಾಗ ಡ್ರಾಯಿಂಗ್ ರೂಮಿನಲ್ಲಿ ಒಬ್ಬ ವ್ಯಕ್ತಿ ಕೂತಿರುವುದನ್ನು ನೋಡಿದರು. ಅವನು ಅಡಿಯಿಂದ ಮುಡಿಯವರೆಗೆ ಶ್ವೇತ ವಸ್ತ್ರಧಾರಿಯಾಗಿದ್ದು, ಕೈಯಲ್ಲಿ ಒಂದು ದಪ್ಪ ಫೈಲ್ ಹಿಡಿದಿದ್ದ.

'ನೀವ್ಯಾರು, ಒಳಗೆ ಹೇಗೆ ಬಂದಿರಿ?' ಲಾಲ್ ಆ ವ್ಯಕ್ತಿಯನ್ನೇ ಗಮನಿಸಿದರು.

'ನಾನು ಯಮದೂತ, ನಿನ್ನನ್ನು ಕರೆದೊಯ್ಯಲು ಬಂದಿರುವೆ' ಎಂದನಾತ.

'ನನ್ನನ್ನೇ ಯಾಕೆ? ನಾನೀಗ ಏನು ಮಾಡಿದ್ದೇನೆ?'

''ಏನಾಯಿತೆಂದರೆ, ನಿನ್ನೆ ನಾನು ನನ್ನ ಅಜಾಗರೂಕತೆಯಿಂದಾಗಿ ಬೇರೊಬ್ಬ ವ್ಯಕ್ತಿಯನ್ನು ನರಕಕ್ಕೆ ಕರೆದೊಯ್ದೆ. ಯಮಧರ್ಮರಾಯ ನನಗೊಂದು ಫೈಲ್ ಕೊಟ್ಟು, 'ಇದರಲ್ಲಿ ಸಾವಿರಾರು ಹೆಸರುಗಳಿವೆ ಮುಂದಿನ ಒಂದು ವರ್ಷದವರೆಗೆ ಇವರನ್ನೆಲ್ಲ ಒಬ್ಬೊಬ್ಬರಂತೆ ಕರೆದುಕೊಂಡು ಬಾ' ಎಂದು ಆದೇಶಿಸಿದರು'' ಎಂದ ಯಮದೂತ.

'ನೀವು ತುಂಬಾ ದಣಿದವನಂತೆ ಕಾಣುತ್ತಿದ್ದೀರ. ಮೊದಲು ಸ್ವಲ್ಪ ಹಣ್ಣು-ಹಾಲು ಸೇವಿಸಿ.' ಲಾಲ್ ಯಮದೂತನಲ್ಲಿ ವಿನಂತಿಸಿಕೊಂಡರು.

ಯಮದೂತ ಹೊಟ್ಟೆ ತುಂಬಾ ಫಲಹಾರ ಸೇವಿಸಿದ ನಂತರ ಅವನಿಗೆ ನಿದ್ರೆ ಆವರಿಸಿತು. ಆಗ ಲಾಲ್ ಅವನು ತಂದಿದ್ದ ಫೈಲ್ ತೆರೆದು ನೋಡಿದ. ಫೈಲ್‌ನಲ್ಲಿ ತನ್ನ ಹೆಸರೇ ಮೊದಲಿತ್ತು. ಲಾಲ್ ತುಂಬಾ ಜಾಗರೂಕತೆಯಿಂದ ತನ್ನ ಹೆಸರನ್ನು ಅಳಿಸಿ ಪಟ್ಟಿಯಲ್ಲಿದ್ದ ಕೊನೆಯ ಹೆಸರನ್ನು ಅಲ್ಲಿ ನಮೂದಿಸಿದ. ತನ್ನ ಹೆಸರನ್ನು ಕೊನೆಗೆ ದಾಖಲಿಸಿದ.

ಎರಡು ಘಂಟೆಯ ನಂತರ ಯಮದೂತ ಎಚ್ಚೆತ್ತು ಚಹಾ ಗುಟುಕರಿಸಿದ ಮೇಲೆ ಲಾಲ್‌ಗೆ ಹೇಳಿದ. 'ನೀನು ತುಂಬಾ ಒಳ್ಳೆಯ ಮನುಷ್ಯ. ನಾನೀಗ ಫೈಲ್‌ನಲ್ಲಿರುವ ಕೊನೆಯ ವ್ಯಕ್ತಿಯಿಂದ ನನ್ನ ಕೆಲಸವನ್ನು ಪ್ರಾರಂಭಿಸುತ್ತೇನೆ!'

★★★

ಒಬ್ಬ ರಾಜಕೀಯ ಧುರೀಣರನ್ನು ಆಸ್ಪತ್ರೆಗೆ ತರಲಾಯಿತು. ವೈದ್ಯರು ಅವರನ್ನು ಪರೀಕ್ಷಿಸಿದರು. ಅವರ ಚೇಲಾಗಳು ಹೆದರಿದ್ದರು.

'ತುಂಬಾ ತಡಮಾಡಿದಿರಿ. ನಿಮಗೆ ಹುಚ್ಚುನಾಯಿ ಕಡಿದಿದೆ. ಈಗ ಇಂಜೆಕ್ಷನ್‌ನಿಂದ ಪ್ರಯೋಜನವಿಲ್ಲ' ಎಂದರು ವೈದ್ಯರು.

'ಬೇಗ ಹೋಗಿ ಪೆನ್ನು ಮತ್ತು ಹಾಳೆಯನ್ನು ತನ್ನಿ' ಎಂದರು ಧುರೀಣರು.

ವೈದ್ಯರು ಕೂಡಲೇ ಪೆನ್ನು ಮತ್ತು ಹಾಳೆಯನ್ನು ಒದಗಿಸಿದರು. ಧುರೀಣರು ಹಾಳೆಯಲ್ಲಿ ಏನೋ ಬರೆಯುತ್ತಿರುವುದನ್ನು ಕಂಡ ವೈದ್ಯರು, 'ನೀವು ವಿಲ್ ಬರೆಯುತ್ತಿದ್ದೀರಾ? ಹೆದರಬೇಡಿ. ನೀವು ಇಷ್ಟು ಬೇಗ ಸಾಯಲ್ಲ, ನಾವು ನಿಮ್ಮನ್ನು ಉಳಿಸಲು ಪ್ರಯತ್ನಿಸುತ್ತಿದ್ದೇವೆ' ಎಂದರು.

'ವಿಲ್ ಯಾರು ಬರೀತಾರೆ? ನಾನು ಹುಚ್ಚನಾದ ಮೇಲೆ ಯಾರು-ಯಾರನ್ನು ಕಡಿಯಬೇಕು ಅಂತ ಲಿಸ್ಟ್ ಮಾಡ್ತಿದ್ದೇನೆ!'

(ಸಂ) ಡಿ.ಎನ್. ಶ್ರೀನಾಥ್

